ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ:1 | ಅಕ್ಟೋಬರ್ 2024 | ಸಂಚಿಕೆ:4 | ಪುಟಗಳು: 10

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್. ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್. ಎಂ
ಶ್ರೀ ಮಾಧವ ಶೆಟ್ಟಿಗಾರ್ ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ. ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ. ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

ವಿಳಾಸ

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಕರಾವಳಿಯ ಹೆಮ್ಮೆಯ ಮಹಿಳೆ-ರಾಣಿ ಅಬ್ಬಕ್ಕ

ನಮ್ಮ ಭಾರತೀಯ ಇತಿಹಾಸದಲ್ಲಿ ಅಪ್ರತಿಮ ಧೈರ್ಯ ಮತ್ತು ಅದಮ್ಯ ಹೋರಾಟದ ಮನೋಭಾವ ತೋರಿಸಿದ ಮಹಿಳೆಯರೆಂದರೆ, ನಮಗೆ ತಕ್ಷಣ ನೆನಪಾಗುವುದು, ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ಮತ್ತು ಕಿತ್ತೂರಿನ ರಾಣಿ ಚೆನ್ನಮ್ಮ. ಆದರೆ, ಅಷ್ಟೇ ಪ್ರಮುಖವಾದ ಮತ್ತು ಬಹುತೇಕ ಮರೆತುಹೋಗಿರುವ  ಇನ್ನೊಂದು ಪ್ರಮುಖ ಹೆಸರೆಂದರೆ, ಉಳ್ಳಾಲದ ರಾಣಿ ಅಬ್ಬಕ್ಕ ಚೌಟ.

ರಾಣಿ ಅಬ್ಬಕ್ಕ, 16ನೇ ಶತಮಾನದಲ್ಲಿ, ಮಂಗಳೂರು ಸಮೀಪದ ಬಂದರು ನಗರಿ ಉಳ್ಳಾಲವನ್ನು ಆಳಿದ ತುಳುನಾಡಿನ ರಾಣಿ. ಆಗ, ಭಾರತ ಪ್ರವೇಶಿಸಿದ್ದ ಪೋರ್ಚುಗೀಸರ ಗುರಿ, ತಮ್ಮ ವ್ಯಾಪಾರವನ್ನು ಸುಗಮಗೊಳಿಸುವ ಸಲುವಾಗಿ ಉಳ್ಳಾಲ ಬಂದರನ್ನು ವಶಪಡಿಸಿಕೊಳ್ಳುವುದಾಗಿತ್ತು. ಆದರೆ, ಅಬ್ಬಕ್ಕ ಸುಮಾರು ನಾಲ್ಕು ದಶಕಗಳ ಕಾಲ, ಅವರ ಪ್ರಯತ್ನಗಳನ್ನು ಹಿಮ್ಮೆಟ್ಟಿಸುತ್ತಾ ಬಂದಳು. ಈ ರೀತಿ, ಅಬ್ಬಕ್ಕಳನ್ನು ವಸಾಹತುಶಾಹಿಗಳ ವಿರುದ್ಧ ಹೋರಾಡಿದ ಮೊದಲ ಭಾರತೀಯ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯೆಂದು ಗುರುತಿಸಬಹುದು.

ಅಬ್ಬಕ್ಕಳ ವಿವಾಹ ಮಂಗಳೂರಿನ ರಾಜ, ಲಕ್ಕ್ಮಪ್ಪ ಅರಸನೊಂದಿಗೆ ನೆರವೇರಿತು. ಅವಳ ಮಾವ ತಿರುಮಲರಾಯ, ಅವಳಿಗೆ ಯುದ್ಧತಂತ್ರಗಳನ್ನು ಹೇಳಿಕೊಟ್ಟರು. ಅವಳು, ಕತ್ತಿ

ಕಾಳಗ, ಬಿಲ್ಲುಗಾರಿಕೆ, ಅಶ್ವದಳ, ಸೇನಾ ತಂತ್ರಗಾರಿಕೆ ಮತ್ತು ರಾಜತಾಂತ್ರಿಕತೆ, ಎಲ್ಲಾ ವಿಷಯಗಳಲ್ಲಿ ತರಬೇತಿ ಪಡೆದಿದ್ದಳು. ಆದರೆ, ಅವಳ ಈ ವಿವಾಹವು ಬಹಳ ಕಾಲ ಉಳಿಯಲಿಲ್ಲ. ಆದ್ದರಿಂದ, ಅಬ್ಬಕ್ಕ ತನ್ನ ಮೂರು ಮಕ್ಕಳೊಂದಿಗೆ ಉಳ್ಳಾಲಕ್ಕೆ ವಾಪಸ್ಸಾದಳು. ಇದರಿಂದ ದ್ವೇಷ ಸಾಧಿಸಿದ ಅವಳ ಗಂಡ, ಅಬ್ಬಕ್ಕಳ ವಿರುದ್ಧ ಸೇಡು ತೀರಿಸಿಕೊಳ್ಳಲು ಪೋರ್ಚುಗೀಸರ ಪರ ಸೇರಿಕೊಂಡು, ಅವಳ ಸೋಲಿಗೆ ಕಾರಣನಾಗುತ್ತಾನೆ.

ಗೋವಾ ಮತ್ತು ಕೇರಳವನ್ನು ವಶಪಡಿಸಿಕೊಂಡ ನಂತರ, ಪೋರ್ಚುಗೀಸರ ಗಮನ ಕರ್ನಾಟಕದ ಕರಾವಳಿ ಭಾಗ ಮಂಗಳೂರು ಪ್ರಾಂತ್ಯದ ಮೇಲೆ ಬಿತ್ತು. ಇದರ ಅರಿವಿದ್ದ ಕರಾವಳಿಯ ರಾಜಮನೆತನಗಳು ಜಾತಿ ಮತ್ತು ಧಾರ್ಮಿಕ ವಿಭಿನ್ನತೆಯನ್ನು ಮೀರಿ ಮೈತ್ರಿ ಮಾಡಿಕೊಂಡಿದ್ದರು. ಅದರಂತೆಯೇ, ರಾಣಿ ಅಬ್ಬಕ್ಕಳ ಪ್ರಾಂತ್ಯದಲ್ಲಿಯೂ ಕೂಡ, ಜೈನರು, ಹಿಂದೂಗಳು ಮತ್ತು ಬ್ಯಾರಿ ಮುಸ್ಲಿಮರು ಸರಿಸಮಾನರಾಗಿ ಪ್ರತಿನಿಧಿಸುತ್ತಿದ್ದರು.

ಉಳ್ಳಾಲದ ವ್ಯಾಪಾರದ ಮೇಲೆ ಕಣ್ಣಿಟ್ಟಿದ್ದ ಪೋರ್ಚುಗೀಸರು, ರಾಣಿ ಅಬ್ಬಕ್ಕಳಿಂದ, ಕಪ್ಪ ಕಾಣಿಕೆ ಮತ್ತು ತೆರಿಗೆಯನ್ನು ಪಡೆಯಲು ಪ್ರಯತ್ನಿಸಿದರು. ಇಲ್ಲವಾದಲ್ಲಿ, ದಾಳಿ ಮಾಡುವುದಾಗಿ ಬೆದರಿಸಿದರು. ಆದರೆ, ಅಬ್ಬಕ್ಕ, ಪೋರ್ಚುಗೀಸರ ಬೇಡಿಕೆಯನ್ನು ಒಪ್ಪಿಕೊಳ್ಳದೆ ನಿರಾಕರಿಸಿ, ಅಲ್ಲಿಯವರೆಗೆ ತಾನು ವ್ಯವಹಾರ ಮಾಡುತ್ತಿದ್ದ ಅರಬ್ಬರೊಂದಿಗಿನ ವ್ಯಾಪಾರ ವಹಿವಾಟನ್ನು ಮುಂದುವರಿಸಿದಳು. ಇದರಿಂದ ಕೋಪಗೊಂಡ ಪೋರ್ಚುಗೀಸರು, ಪದೇ ಪದೇ ಉಳ್ಳಾಲವನ್ನು ದಾಳಿ ಮಾಡಲು ಪ್ರಾರಂಭಿಸಿದರು. ಐತಿಹ್ಯಗಳ ಪ್ರಕಾರ, ಮೊದಲ ದಾಳಿಯು 1556ರಲ್ಲಿ ನಡೆಯಿತು. ಎರಡು ವರ್ಷಗಳ ನಂತರ, ಪೋರ್ಚುಗೀಸರು, ಇನ್ನೂ ಹೆಚ್ಚಿನ ಸೇನಾಬಲದೊಂದಿಗೆ ದಾಳಿ ಮಾಡಿದರು. ಆದರೆ, ಅಬ್ಬಕ್ಕಳ ರಾಜ ತಾಂತ್ರಿಕತೆ ಅವರನ್ನು ಪುನಃ ಹಿಂದಕ್ಕೆ ತಳ್ಳಿತು. ಮೂರನೆಯ ದಾಳಿಯಲ್ಲಿ, ಪೋರ್ಚುಗೀಸ್ ಸೈನ್ಯವು ಉಳ್ಳಾಲವನ್ನು ವಶಪಡಿಸಿಕೊಳ್ಳಲು ಯಶಸ್ವಿಯಾಯಿತು. ಆದರೆ, ಅಬ್ಬಕ್ಕ ಸೆರೆ ಸಿಕ್ಕುವ ಮೊದಲೇ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದಳು. ಅನಂತರ, ತನ್ನ 200 ನಿಷ್ಠಾವಂತ ಸೈನಿಕರ ಸಹಾಯದಿಂದ, ಪೋರ್ಚುಗೀಸರ ಮೇಲೆ ರಾತ್ರಿ ವೇಳೆ ದಾಳಿ ಮಾಡಿ, ಅವರ ಪಡೆಯ 70 ಸೈನಿಕರನ್ನು ಸಾಯಿಸಿದಳು. ಇದರಿಂದ ಭಯಭೀತರಾದ ಪೋರ್ಚುಗೀಸರ ಪಡೆ ಜಾಗ ಖಾಲಿಮಾಡಿತು.


ಮೊದಲಬಾರಿಗೆ, ಅಬ್ಬಕ್ಕಳ ಚಾಣಾಕ್ಷತನವನ್ನು ಕಣ್ಣಾರೆ ನೋಡಿದ ಪೋರ್ಚುಗೀಸರು, ಅಬ್ಬಕ್ಕಳನ್ನು ನೇರ ಮಾರ್ಗದಲ್ಲಿ ಸುಲಭವಾಗಿ ಸೋಲಿಸಲು ಸಾಧ್ಯವಿಲ್ಲವೆಂದು ಅರಿತು, ಮೋಸದ ದಾರಿಯನ್ನು ಆಶ್ರಯಿಸಿದರು. ಬೇರ್ಪಟ್ಟ ಅವಳ ಗಂಡನೊಂದಿಗೆ ಸ್ನೇಹ ಒಪ್ಪಂದ ಮಾಡಿಕೊಂಡು ಸಹಾಯ ಪಡೆದರು. ಆದರೂ ಅಬ್ಬಕ್ಕ ಬಗ್ಗಲಿಲ್ಲ.

ಇದಾದ ನಂತರ, 1581ರಲ್ಲಿ, 3000 ಜನರ ಸುಸಜ್ಜಿತ ಪೋರ್ಚುಗೀಸ್ ಪಡೆ, ಒಂದು ಮುಂಜಾನೆ ಅನಿರೀಕ್ಷಿತವಾಗಿ ಉಳ್ಳಾಲದ ಮೇಲೆ ದಾಳಿ ಮಾಡಿತು. ಆಗ ಅಬ್ಬಕ್ಕ, ತನ್ನ ಮನೆದೇವರ ದರ್ಶನ ಮಾಡಿ ಹಿಂದಿರುಗುತ್ತಿದ್ದಳು. ಆದರೂ, ತಕ್ಷಣ ಕಾರ್ಯ ಪ್ರವೃತ್ತಳಾದಳು. ಅವಳು, ತನ್ನ ಜನರಿಗೆ, 'ಮಾತೃಭೂಮಿಯನ್ನು ಉಳಿಸಲು ಹೋರಾಡಿ. ವಿರೋಧಿಗಳನ್ನು ಹಿಮ್ಮೆಟ್ಟಿಸಿ.' ಎನ್ನುವ ಕರೆ ನೀಡುತ್ತಾ ಹುರಿದುಂಬಿಸಿದಳು. ಅವಳು ಪೋರ್ಚುಗೀಸರ ಅನೇಕ ಹಡಗುಗಳನ್ನು ಸುಟ್ಟುಹಾಕಲು ಯಶಸ್ವಿಯಾದರೂ, ಅವರಿಂದ ಲಂಚ ಪಡೆದ ತನ್ನ ಕಡೆಯವರಿಂದಲೇ ಮೋಸ ಹೋಗಿ, ಶತ್ರುಗಳಿಂದ ಸೆರೆ ಹಿಡಿಯಲ್ಪಟ್ಟಳು. ಆದರೆ, ತನ್ನ ಕೊನೆಯ ಕ್ಷಣದವರೆಗೆ, ಶರಣಾಗಲು ಒಪ್ಪಿಕೊಳ್ಳದೆ, ಸೆರೆಯಲ್ಲಿಯೇ ಕೊನೆಯುಸಿರೆಳೆದಳು.

ಹೀಗೆ, ತನ್ನ ಮಾತೃಭೂಮಿಯ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ನೀಡಿದ ಅಬ್ಬಕ್ಕ, ತನ್ನ ಆಳ್ವಿಕೆಯ ಉದ್ದಕ್ಕೂ, ಪೋರ್ಚುಗೀಸರ ಪಾಲಿಗೆ ಕಂಟಕವಾಗಿಯೇ ಉಳಿದಳು. ಇದು, ತುಳುನಾಡಿನ ಈ ವೀರ ಮಹಿಳೆಯ ಧೈರ್ಯ ಮತ್ತು ಜಾಣ್ಮೆಯನ್ನು ತಿಳಿಸುತ್ತದೆ. ಅವಳ ಜೀವನ ಚರಿತ್ರೆಯನ್ನು ನಾವು ಬಹುತೇಕ ಮರೆತು ಹೋಗಿದ್ದೇವೆ, ಆದರೆ, ಅವಳ ಕಥೆ, ತುಳುನಾಡಿನ ಜಾನಪದ ಸಂಸ್ಕೃತಿಯ ಹೆಮ್ಮೆಯ ಭಾಗವಾಗಿ ಇಂದಿಗೂ ಉಳಿದುಕೊಂಡಿದೆ.



**ಡಾ. ಜ್ಯೋತಿ**
**ತುಮಕೂರು ವಿಶ್ವವಿದ್ಯಾನಿಲಯ**
**ತುಮಕೂರು**



AI generated image: No photo credits required

# ಹಳೆಯ ಮನೆ

ಹಳೆಯ ಮನೆಯೊಂದು
ದುಸ್ಥಿತಿಯೊಳಿಹುದು
ಪ್ರಾಯದ ಮನುಜನಂತೆ
ತನುವು ಸುಕ್ಕಾಗಿಹುದು

ಅಲ್ಲಲ್ಲಿ ಬೆಳೆದಾ ಬಳ್ಳಿ
ಬಿಡಲಿಲ್ಲ ಜಾಗವಲ್ಲಿ
ಪ್ರಾಯದ ಮನುಜನಂತೆ
ಜೋತಿಹ ನರಗಳಲ್ಲಿ

ನಿಂತಿಹ ಫಿಯೆಟ್ ಕಾರು
ತೋರಿಹುದು ಕಾರುಬಾರು
ಪ್ರಾಯದ ಮನುಜನಂತೆ
ಇಳಿದಿಹುದು ಪೊಗರು

ಗೋಡೆಯೋ ಒಡೆದಿಹುದು
ಕಿಟಕಿಗಳು ಮುರುಟಿಹುದು
ಪ್ರಾಯದ ಮನುಜನಂತೆ
ನಿಕಾಯ ಲಾಚಾರಿಹುದು

ಸರಿಯಿರಲು ಮೆರೆದಿತ್ತು
ತೋರುತಲಿ ದೌಲತ್ತು
ಪ್ರಾಯದ ಮನುಜನಂತೆ
ಈಗೆಲ್ಲಿಹುದು ತಾಕತ್ತು

ಜನರಿರಲು ಮೆರೆದಾಡಿ
ಕಾಂಚಾಣ ಕುಣಿದಾಡಿ
ಪ್ರಾಯದ ಮನುಜನಂತೆ
ನರಳಿಹುದು ಒದ್ದಾಡಿ



**ಡಾ. ಶಿವಪ್ರಸಾದ್ ಕಾರ್ಕಳ,**
**ಉಡುಪಿ.**



# ಸಂಪಾದಕ ವಾಣಿ

## ನಾರಾಯಣ ಶೆಟ್ಟಿಗಾರ್

ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿ - ಇವರು ನವರಾತ್ರಿಯ ನವದುರ್ಗೆಯರು. ನವರಾತ್ರಿ ಕಾಲದಲ್ಲಿ ಆದಿಶಕ್ತಿಯ ಒಂಬತ್ತು ವಿಧದ ರೂಪಗಳನ್ನು ಆರಾಧಿಸಲಾಗುತ್ತದೆ. ಹತ್ತನೆಯ ದಿನವೇ ವಿಜಯದಶಮಿ. ನವರಾತ್ರಿ ಸಂಭ್ರಮವನ್ನು ದಸರಾ ಹಬ್ಬ ಎಂದೂ ಕರೆಯಲಾಗುತ್ತದೆ. ಈ (ಅಕ್ಟೋಬರ್) ತಿಂಗಳ 3ನೇ ತಾರೀಕಿನಿಂದ ಹಿಡಿದು 12ನೇ ದಿನಾಂಕದ ವರೆಗೆ ನವರಾತ್ರಿ ಉತ್ಸವ ನಡೆಯಲಿದೆ.

ರಾಕ್ಷಸರಾಜ ಮಹಿಷಾಸುರನ ಉಪಟಳ ತಾಳಲಾರದ ದೇವತೆಗಳ ಮೊರೆಯನ್ನು ಕೇಳಿ ತ್ರಿಮೂರ್ತಿಗಳು ತಮ್ಮ ದೈವಿಕ ಶಕ್ತಿಯನ್ನು ಒಗ್ಗೂಡಿಸಿ ಶಕ್ತಿಯ ಮೂರ್ತರೂಪವಾದ ದುರ್ಗಾದೇವಿಯನ್ನು ಸೃಷ್ಟಿಸಿದರು. ಒಂಬತ್ತು ರಾತ್ರಿಗಳ ತೀವ್ರ ಯುದ್ಧದ ನಂತರ ವಿಜಯದಶಮಿಯಂದು ಮಹಾದುರ್ಗೆ ಮಹಿಷಾಸುರನನ್ನು ಮರ್ದಿಸಿದಳು ಎಂಬುದೊಂದು ಕಥೆ. ಇನ್ನೊಂದು ಕಥೆಯ ಪ್ರಕಾರ ಸೀತೆಯನ್ನು ರಕ್ಷಿಸಲು ಶ್ರೀರಾಮನು ರಾವಣನೊಂದಿಗೆ ಯುದ್ಧಮಾಡುವ ಮೊದಲು ದುರ್ಗಾದೇವಿಯನ್ನು ಪೂಜಿಸಿ ಅವಳ ಅನುಗ್ರಹವನ್ನು ಪಡೆದುಕೊಂಡ ಮತ್ತು ದಶಶಿರನ ಸಂಹಾರ ಮಾಡಿ ವಿಜಯ ಸಾಧಿಸಿದ. ದ್ವಾಪರಯುಗದಲ್ಲಿ ಪಾಂಡವರು ತಮ್ಮ ಅಜ್ಞಾತವಾಸವನ್ನು ವಿಜಯದಶಮಿಯ ದಿನ ಮುಗಿಸಿ, ಬನ್ನಿಮರದಿಂದ ತಮ್ಮ ಆಯುಧಗಳನ್ನು ಹಿಂದಕ್ಕೆ ಪಡೆದು ಕುರುಕ್ಷೇತ್ರ ಯುದ್ಧದಲ್ಲಿ ಜಯ ಗಳಿಸಿದರು ಎಂಬುದು ಮತ್ತೊಂದು ಕಥೆ.

*****

ನಿಮ್ಮ **'ಶೆಟ್ಟಿಗಾರ ವಾಣಿ'** ತನ್ನ ನಾಲ್ಕನೆಯ ಹೆಜ್ಜೆಯನ್ನಿಡುತ್ತಿದೆ. ನವವಧುವಿನಂತೆ ಸರ್ವಾಲಂಕಾರ ಭೂಷಿತೆಯಾಗಿ ಕಂಗೊಳಿಸುತ್ತಿದೆ. ನಿರೀಕ್ಷೆಗಿಂತಲೂ ಹೆಚ್ಚು ಜನಮನ್ನಣೆ ಪಡೆಯುತ್ತಿದೆ. ಆದರೂ ಇನ್ನೂ ಹೆಚ್ಚು ಯುವಕರು ಇದರಲ್ಲಿ ಭಾಗವಹಿಸುವಂತಾಗಲೆಂದು ನಮ್ಮ ಆಸೆ. ಈ ಪತ್ರಿಕೆ ಇರುವುದೇ ನವಪ್ರತಿಭೆಗಳಿಗಾಗಿ. ನಮ್ಮಾಸೆ ಹೆಚ್ಚಿನ ಪ್ರಮಾಣದಲ್ಲಿ ಕೈಗೂಡುವುದೆಂದು ನಮ್ಮ ನಂಬಿಕೆ.

*****

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟದ ಇತ್ತೀಚಿನ ಕಾರ್ಯಕ್ರಮಗಳಲ್ಲಿ ಸದಸ್ಯರು ಅಧಿಕ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಸಂತೋಷದ ಸಂಗತಿ. ಕೋವಿಡ್ ಯುಗದ ಅನಿವಾರ್ಯ ಹಿನ್ನಡೆಯ ನಂತರದ ಬದಲಾದ ಸನ್ನಿವೇಶದಲ್ಲಿ ಇದೊಂದು ಸ್ಫೂರ್ತಿದಾಯಕ ಬೆಳವಣಿಗೆ. ಇದೇ ತಿಂಗಳ 27ನೇ ದಿನಾಂಕ ಭಾನುವಾರ ಕೂಟದ **ಸರ್ವ ಸದಸ್ಯರ ಮಹಾಸಭೆ ಮತ್ತು 34ನೇ ವಾರ್ಷಿಕೋತ್ಸವ** ನಡೆಯಲಿದೆ. ಈ ಮಹಾಸಭೆಗೆ ಸದಸ್ಯರೆಲ್ಲರೂ ತಮ್ಮ ಕುಟುಂಬದವರೊಂದಿಗೆ ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಸಮಾರಂಭವನ್ನು ಅಭೂತಪೂರ್ವ ಯಶಸ್ವಿಗೊಳಿಸುವಿರಾಗಿ ನಮ್ಮೆಲ್ಲರ ಹಾರೈಕೆ.

# ಶಿಕ್ಷಕನಾಗುವ ಕನಸು ನನಸಾಯಿತು


AI generated image: No photo credits required

1970ರ ದಶಕದ ಆದಿಯಲ್ಲಿ ಪದವಿ ವ್ಯಾಸಂಗ ಮುಗಿಸಿ ಬ್ಯಾಂಕ್ ಉದ್ಯೋಗಕ್ಕೆ ಸೇರಿಕೊಂಡಿದ್ದೆ. ನಾನಾಗ ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಕೆಲಸ ಮಾಡುತ್ತಿದ್ದೆ. ನಾಗಮಂಗಲದಲ್ಲಿ ಆಗಿನ್ನೂ ಹೇಮಾವತಿ ನೀರಾವರಿ ಯೋಜನೆ ಕಾರ್ಯಗತ ಹೊಂದಿರಲಿಲ್ಲ. ಸುತ್ತಮುತ್ತಲೆಲ್ಲಾ ಒಣಭೂಮಿಯೇ ಇದ್ದು ತುಂಬಾ ಹಿಂದುಳಿದ ಪ್ರದೇಶವಾಗಿತ್ತು. ತಾಲೂಕು ಕೇಂದ್ರವಾದರೂ ಬ್ಯಾಂಕ್ ಶಾಖೆ ಮಾತ್ರ ಗ್ರಾಮೀಣ ಶಾಖೆ ಎಂದೇ ಪರಿಗಣಿಸಲ್ಪಟ್ಟಿತ್ತು. ಶೈಕ್ಷಣಿಕವಾಗಿಯೂ ಆಗ ಮಂಡ್ಯ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆಯಾಗಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಮಂಡ್ಯ ಜಿಲ್ಲೆ ಕೊನೆಯ ಸ್ಥಾನದಲ್ಲಿತ್ತು.

ಆ ವರ್ಷ (1975 ಇರಬಹುದು) ಅಲ್ಲಿನ ಬಾಲಕಿಯರ ಪ್ರೌಢ ಶಾಲೆಯ ಶಿಕ್ಷಕರು ತಮ್ಮ ಬೇಡಿಕೆಗಳು ಈಡೇರದ ಕಾರಣ ಮುಷ್ಕರ ಮಾಡುವ ನಿರ್ಧಾರ ಮಾಡಿದರು. SSLC ಪರೀಕ್ಷೆಗೆ 4 ರಿಂದ 5 ತಿಂಗಳು ಇರುವಾಗ ಇದ್ದಕ್ಕಿದ್ದಂತೆ ಅನಿರ್ದಿಷ್ಟ ಕಾಲ ಮುಷ್ಕರ ಹೂಡಿಯೇ ಬಿಟ್ಟರು. ವಿದ್ಯಾರ್ಥಿಗಳಿಗೂ ಪಾಲಕರಿಗೂ ಮುಂದೇನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅಲ್ಲಿ ಆಗ ಯಾವ ಟ್ಯೂಶನ್ ಕೇಂದ್ರಗಳ ವ್ಯವಸ್ಥೆಯೂ ಇರಲಿಲ್ಲ. ಕೆಲವೇ ಕೆಲವು ಟ್ಯೂಶನ್ ನೀಡಬಹುದಾದ ವ್ಯಕ್ತಿಗಳು ಶಿಕ್ಷಕರು ಮಾತ್ರ. ಹಾಗೆ ಟ್ಯೂಶನ್ ಹೇಳಬೇಕಾದವರೇ ಮುಷ್ಕರದಲ್ಲಿದ್ದರು. ಪಾಠ ಹೇಳುವ ಶಕ್ತಿಯಿದ್ದ ಸ್ಥಳೀಯ ಪದವೀಧರರು ಇದ್ದರೆ ಅವರು ಉದ್ಯೋಗ ನಿಮಿತ್ತ ಬೇರೆ ಊರಿನಲ್ಲಿದ್ದರು. ಆದರೆ ಊರಿನ ಹಿರಿಯರಿಗೆ ಬ್ಯಾಂಕಿನಲ್ಲಿ ಪದವೀಧರರಿರುವ ವಿಷಯ ತಿಳಿದಿತ್ತು. ಕೆಲವು ಊರ ಹಿರಿಯರು ಒಟ್ಟಾಗಿ ಬಂದು ಬ್ಯಾಂಕ್ ಮ್ಯಾನೇಜರ್ ರವರನ್ನು ಕಂಡು ಆ ಸಂದಿಗ್ಧ ಸಮಯದಲ್ಲಿ ವಿದ್ಯಾರ್ಥಿಗಳ ಸಹಾಯಕ್ಕೆ ಮುಂದಾಗಬೇಕೆಂದು ಕೇಳಿಕೊಂಡರು.

ಶಿಕ್ಷಕನಾಗಬೇಕೆಂದು ನನ್ನ ಮಹದಾಸೆಯಾಗಿತ್ತು. ಪದವಿ ಮುಗಿದ ಕೂಡಲೇ ನಾನು ಶಿಕ್ಷಕ ವೃತ್ತಿಗಾಗಿ ಪ್ರಯತ್ನ ಮಾಡುತ್ತಿದ್ದೆ. ಒಂದು ಪ್ರೌಢ ಶಾಲೆಯಲ್ಲಿ ಗಣಿತ ಶಿಕ್ಷಕನ ಹುದ್ದೆ ಖಾಲಿ ಇರುವ ಜಾಹೀರಾತು ನೋಡಿ ಸಂದರ್ಶನಕ್ಕೆ ಹಾಜರಾದೆ. ಮುಖ್ಯ ಅಧ್ಯಾಪಕರು ಮರುದಿನದಿಂದಲೇ ಕರ್ತವ್ಯಕ್ಕೆ ಹಾಜರಾಗುವಂತೆ ಹೇಳಿದರು. ಸಂತೋಷದಿಂದ ನಮ್ಮೂರಿಗೆ ಮರಳಿದೆ. ಆದರೆ ನನ್ನ ಹಿತೈಸಿ ಗುರುಗಳು ಮತ್ತು ಹಿರಿಯರು ನಾನು ಆ ಕೆಲಸಕ್ಕೆ ಹೋಗುವುದನ್ನು ಒಪ್ಪಲಿಲ್ಲ. ಕಾರಣ ಆ ಕೆಲಸ ಆ ಶೈಕ್ಷಣಿಕ ವರ್ಷದ ಕೊನೆಯವರೆಗೆ ಮಾತ್ರ ಲಭ್ಯವಿದ್ದು, ಅದನ್ನು ಮುಂದುವರಿಸುವ ಸಾಧ್ಯತೆ ಕಡಿಮೆ ಇತ್ತು. ನಾನಾಗಲೇ ಬ್ಯಾಂಕ್ ಪರೀಕ್ಷೆಯಲ್ಲಿ ಪಾಸಾಗಿ, ಸಂದರ್ಶನದಲ್ಲೂ ಆಯ್ಕೆಗೊಂಡು ಯಾವುದೇ ಕ್ಷಣದಲ್ಲೂ ಕೆಲಸದ ಆದೇಶ ಕೈಸೇರುವ ಸಾಧ್ಯತೆ ಇತ್ತು. ಆದ್ದರಿಂದ ಭಾರವಾದ ಹೃದಯದಿಂದ ಆ ಶಾಲೆಗೆ ಬರುವುದಿಲ್ಲ ಎಂದು ಹೇಳಬೇಕಾಯಿತು. ಕೆಲವೇ ದಿನಗಳಲ್ಲಿ ಬ್ಯಾಂಕ್ ಕೆಲಸದ ಆದೇಶ ಪತ್ರವೂ ತಲುಪಿ, ಬ್ಯಾಂಕ್ ಕೆಲಸಕ್ಕೆ ಸೇರಿಕೊಂಡಿದ್ದೆ.

ಆ ಕಾಲದಲ್ಲಿ ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧ ಅತ್ಯಂತ ಉಚ್ಛ ಮಟ್ಟದಲ್ಲಿತ್ತು. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಸಿಬ್ಬಂದಿಗೆ ಅತಿ ಹೆಚ್ಚು ಗೌರವ ದೊರೆಯುತ್ತಿತ್ತು. ಊರಿನ ಎಲ್ಲಾ ಕಾರ್ಯಕ್ರಮಗಳಿಗೂ ವಿಶೇಷ ಆಮಂತ್ರಣ ಇರುತ್ತಿತ್ತು ಮಾತ್ರವಲ್ಲ ಕಡ್ಡಾಯವಾಗಿ ಹಾಜರಾಗುವುದೂ ಅನಿವಾರ್ಯವಾಗಿತ್ತು. ಹೀಗೆ ಉತ್ತಮ ಸಂಬಂಧ ಹೊಂದಿರುವ ಕಾರಣ ಊರ ಹಿರಿಯರ ಬೇಡಿಕೆಯನ್ನು ತಳ್ಳಿ ಹಾಕುವುದು ಸಾಧ್ಯವಿರಲಿಲ್ಲ. ಆದ್ದರಿಂದ ಮ್ಯಾನೇಜರ್ ಕೂಡಾ ಸಂತೋಷದಿಂದ ಆ ಶಾಲೆಯ ಮಕ್ಕಳಿಗೆ ಪಾಠ ಹೇಳಿಕೊಡಲು ಒಪ್ಪಿಕೊಂಡರು.

ಮುಂದೆ ಪರೀಕ್ಷೆಯ ವರೆಗೂ ಪ್ರತಿದಿನ ಬೆಳಿಗ್ಗೆ 7ರಿಂದ 9 ಗಂಟೆಯ ವರೆಗೆ ಅಲ್ಲಿನ ಗಾಂಧಿಭವನದಲ್ಲಿ ಉಚಿತವಾಗಿ ಪಾಠದ ತರಗತಿಗಳನ್ನು ನಡೆಸಿದೆವು. 10 ಗಂಟೆಗೆ ಬ್ಯಾಂಕ್ ಪ್ರಾರಂಭವಾಗುತ್ತಿತ್ತು. ನಮ್ಮ ಮ್ಯಾನೇಜರ್ ಇಂಗ್ಲಿಷ್ ತೆಗೆದುಕೊಂಡರೆ ನಾನು ಗಣಿತ ತೆಗೆದುಕೊಂಡೆ. ನನ್ನ ಸಹೋದ್ಯೋಗಿಗಳು ಉಳಿದ ವಿಷಯಗಳನ್ನು ತೆಗೆದುಕೊಂಡರು. ವಿದ್ಯಾರ್ಥಿಗಳೂ ಸಂತೋಷದಿಂದ ತರಗತಿಗಳಿಗೆ ಹಾಜರಾಗತೊಡಗಿದರು.

ಈ ಮಧ್ಯೆ ಒಂದು ಮೂಗರ್ಜಿಯೂ ನಮ್ಮ ಬ್ಯಾಂಕಿನ ಮುಖ್ಯ ಕಛೇರಿಯನ್ನು ತಲುಪಿತು. ಬ್ಯಾಂಕ್ ಸಿಬ್ಬಂದಿ ತಮ್ಮ ಕೆಲಸ ಬಿಟ್ಟು ಟ್ಯೂಶನ್ ನಡೆಸುತ್ತಿದ್ದಾರೆಂದು ಆಪಾದಿಸಲಾಗಿತ್ತು. ಮುಖ್ಯ ಕಛೇರಿಯಿಂದ ವಿವರಣೆ ಕೇಳಿ ಪತ್ರ ಬಂತು. ಬಂದ ಪತ್ರಕ್ಕೆ ಉತ್ತರವಾಗಿ ನಡೆದ ಸತ್ಯ ಸಂಗತಿಯನ್ನು ವಿವರವಾಗಿ ತಿಳಿಸಲಾಯಿತು. ಆ ಕಾಲದಿಂದಲೂ ನಮ್ಮ ಬ್ಯಾಂಕ್ ಸಮಾಜ ಸೇವೆಯ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿತ್ತು. ಆಗಿನ ಜನರಲ್ ಮ್ಯಾನೇಜರ್ ರವರಂತೂ ಸಮಾಜ ಸೇವೆಗೆ ವಿಶೇಷ ಒತ್ತು ನೀಡುತ್ತಿದ್ದರು. ಗಾಂಧೀ ತತ್ವಗಳನ್ನು ಪಾಲಿಸುತ್ತಿದ್ದರು. ವಿಷಯ ಮನವರಿಕೆಯಾದ ಮೇಲೆ ಮುಖ್ಯ ಕಛೇರಿಯಿಂದ ನಮ್ಮ ಕೆಲಸವನ್ನು ಶ್ಲಾಘಿಸಿ ಪತ್ರ ಬಂತು. ಜೊತೆಗೆ ಸಮಾಜ ಸೇವೆಗಳನ್ನು ಮುಂದುವರಿಸುವಂತೆ ಉತ್ತೇಜನವೂ ದೊರೆಯಿತು.

ನಮ್ಮ ಅದೃಷ್ಟವೇ ಇರಬೇಕು, ಆ ವರ್ಷದ SSLC ಪರೀಕ್ಷೆಯಲ್ಲಿ ನಮ್ಮ ಶಾಲೆಯ ಫಲಿತಾಂಶ ಎಂದಿಗಿಂತ ಉತ್ತಮವಾಗಿತ್ತು. ನಮ್ಮ ಶ್ರಮವೂ ಸಫಲವಾಗಿತ್ತು. ಊರ ಹಿರಿಯರ ಪ್ರಶಂಸೆಯೂ ದೊರಕಿತ್ತು. ಶಿಕ್ಷಕನಾಗುವ ನನ್ನ ಆಸೆಯೂ ಈಡೇರಿತ್ತು.



ನಾರಾಯಣ ಶೆಟ್ಟಿಗಾರ್
ವಿಶ್ವಪ್ರಿಯ ನಗರ, ಬೆಂಗಳೂರು

# ಒಂದು ಡ್ರಾಪ್ ಕಥೆ!

ಸುಬ್ರಾಯ ಭಟ್ ಒಂದಲ್ಲ, ಎರಡೆರಡು ಬೀಯರ್ ಏರಿಸಿದ್ದನ್ನು ನೋಡಿ ನನಗೆ ಆಶ್ಚರ್ಯ ಮತ್ತೆ ದಿಗಿಲಾಯಿತು. ಆಶ್ಚರ್ಯಕ್ಕೆ ಕಾರಣ ಭಟ್ರು ಆ ಪ್ರಮಾಣದಲ್ಲಿ ಕುಡಿಯುವುದನ್ನು ನೋಡಿ! ದಿಗಿಲಿಗೆ ಕಾರಣ ಅವರೇ ನನ್ನನ್ನು ಬೈಕಿನಲ್ಲಿ ರೂಮ್ ಹತ್ತಿರ ಡ್ರಾಪ್ ಮಾಡುವುದಕ್ಕಿದ್ದರು, ಹಾಗಾಗಿ! ಪಾರ್ಟಿ ಕೊಟ್ಟವರು ನಮ್ಮ ಶಿವರಾಮ್ ಭಟ್. ಒಂದು ತಿಂಗಳ ಹಿಂದೆ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಸಾಲಿಗ್ರಾಮ ಮೇಳದ ರಾತ್ರಿಯ ಆಟವನ್ನು ಆಡಿಸಿದ್ದರು. ಆಟದಲ್ಲಿ ತಕ್ಕಮಟ್ಟಿಗೆ ಕಲೆಕ್ಷನ್ ಆಗಿತ್ತು. ಹಾಗಾಗಿ ಆ ಕಲೆಕ್ಷನ್ ಹಿಂದೆ ದುಡಿದವರಿಗೆ ರಿಚ್‌ಮಂಡ್ ರೋಡಿನಲ್ಲಿರುವ ಹೋಟೆಲಿನಲ್ಲಿ ಈ ಪಾರ್ಟಿ ಏರ್ಪಡಿಸಿದ್ದರು. ಒಟ್ಟು ಇಪ್ಪತ್ತೆರಡು ಮಂದಿಗೆ. ತುಂಡು ಇರಲಿಲ್ಲ. ಪ್ಯೂರ್ ವೆಜ್. ಆದ್ರೆ ಗುಂಡು ಇತ್ತು, ಬರೇ ಬೀಯರ್! ತಂದಿದ್ದು ಆರು ಬಾಟಲ್. ಕುಡಿದವರು ಐದು ಮಂದಿ. ನಂಗೆ ಅದು ಜೀವನದ ಮೊದಲ ಪಾರ್ಟಿ. ಕೆಲವರು ಒತ್ತಾಯಿಸಿದರೂ ನಾನು ಪೆಪ್ಸಿಯಲ್ಲೇ ಸುಧಾರಿಸಿದೆ.

ನಾನು ಊರಿನಿಂದ ಬೆಂಗಳೂರಿಗೆ ಬಂದು ಕೇವಲ ಎರಡು ತಿಂಗಳಾಗಿದ್ದಷ್ಟೆ. ನಾವು ಹೆಚ್ಚಿನವರು ನಮಸ್ತೇ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದೆವು. ನಮ್ಮಲ್ಲಿ ಕೆಲವರು ನಾಗವಾರದಲ್ಲಿದ್ದರೆ, ಸುಬ್ರಾಯ ಭಟ್ ಮತ್ತೆ ಕೆಲವರು ಗಿರಿನಗರದಲ್ಲಿದ್ದರು. ನಾನು ಮಾತ್ರ ಕಳೆದ ವಾರವಷ್ಟೇ ನಾಗವಾರದಿಂದ ಶಿಫ್ಟ್ ಆಗಿ ಬನಶಂಕರಿ ಎರಡನೇ ಹಂತದಲ್ಲಿ ಇನ್ನೂರಿಪ್ಪತ್ತು ರುಪಾಯಿ ಬಾಡಿಗೆಯ ರೂಮ್‌ನಲ್ಲಿದ್ದೆ. ಒಬ್ಬನೇ! ಅಂದು ಪಾರ್ಟಿ ರಾತ್ರಿ ತಡವಾಗಿ ಮುಗಿಯುವ ಕಾರಣ ನಂಗೆ ಸುಬ್ರಾಯ ಭಟ್ ರೂಮಿಗೆ ಬಿಡುತ್ತಾರೆ, ಎಂದು ಪಾರ್ಟಿ ಹೋಸ್ಟ್ ನನ್ನಾತ್ಮೀಯರಾದ ಶಿವರಾಮ ಭಟ್ ಹೇಳಿದ್ದರು.

ಕುಡಿದು ಟೈಟ್ ಆಗುವವರನ್ನು ಊರಲ್ಲಿರುವಾಗ ಸದಾ ನೋಡುತ್ತಿದ್ದೆ. ನನ್ನ ತೀರ್ಥರೂಪರು ತೀರ್ಥ ಸೇವಿಸುವುದರಲ್ಲಿ ಸಿದ್ಧಹಸ್ತರು. ಹಾಗೆಂದು ನಾನು ಕುಡಿತದಿಂದ ಗಾವುದ ದೂರವಿದ್ದೆ. ಆದರೆ ಇಂದು ಕುಡುಕರೊಬ್ಬರ ಹಿಂದೆ ಕೂರುವ ಸ್ಥಿತಿ ಬಂತಲ್ಲ, ಎಂದು ಕೊರಗಿದೆ. ಆದರೆ ನಿರ್ವಾಹವಿರಲಿಲ್ಲ. ಸಮಯ ಆಗಲೇ ರಾತ್ರಿ ಹತ್ತು ಗಂಟೆ ದಾಟಿತ್ತು. ನನಗೆ ಒಂದೆರಡು ಬಸ್‌ರೂಟ್ ಬಿಟ್ಟು ಬೆಂಗಳೂರಿನ ಬೇರೆ ಯಾವುದೇ ದಿಕ್ಕುಗಳ ಪರಿಚಯವಿರಲಿಲ್ಲ. ಹೊಸ ಊರು. ರಾತ್ರಿ ಹೆಚ್ಚಿದಂತೆ ಭಯವೂ ಹೆಚ್ಚಾಯಿತು.

ಪಾರ್ಟಿ ಮುಗಿಯಿತು. ಎಲ್ಲರೂ ಹೊರಟರು. ಸುಬ್ರಾಯ ಭಟ್ ಕೂಡಾ ಹೊರಟರು. ಅವರು ಸುಳ್ಯದವರು. ಅವರು ಅದೇ ಕಂಪೆನಿಯಲ್ಲಿ ಫೈನಾನ್ಸ್ ಮ್ಯಾನೇಜರ್ ಆಗಿದ್ದರು. ನನ್ನ ಬಾಸ್‌ನ ಮಿತ್ರ. ಮನುಷ್ಯ ಒಳ್ಳೆಯವರು. ಕುಡಿದಾಗ ಇನ್ನೂ ಒಳ್ಳೆಯವರು. ಅವರದ್ದು ಕಾವಸಾಕಿ ಬೈಕ್. ಸ್ವಲ್ಪ ತೂರಾಡುತ್ತಾ ಬಂದು ಬೈಕ್ ಏರಿದರು. ಅವರ ಹಿಂದೆ ಕುಳಿತುಕೊಳ್ಳಲು ನಾನು ಹಿಂಜರಿದೆ. "ರಮೇಶ, ನಾನು ಸ್ಟಡೀ ಇದ್ದೇನೆ ಮಾರಾಯ. ಏನೂ ಹೆದರ್ಬೇಡ. ನೀ ಕೂರು" ಎಂದರು. ನಾನು ಹೆದರಿಕೆಯಿಂದಲೇ ಕೂತು ಅವರನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ. ನಾನು ಬೀಳುತ್ತೇನೆಂದಲ್ಲ, ಅವರು ಬ್ಯಾಲೆನ್ಸ್ ತಪ್ಪದಂತಿರಲು! ಆದ್ರೆ ದಾರಿಯಲ್ಲಿ ಹೋಗುತ್ತಾ ಅವರು ಆಚೀಚೆ ಓಲಾಡುವಾಗ ನನ್ನ ಜೀವ ಬಾಯಿಗೆ ಬರುತ್ತಿತ್ತು. ಅವರು ಬಾಕಿ ಸಮಯದಲ್ಲಿ ಬೈಕ್ ಚೆನ್ನಾಗಿ ಓಡಿಸುತ್ತಿದ್ದರು. ಕುಡಿದ್ರೆ ಅವರ ಸ್ಪಿರಿಟ್ ಹೆಚ್ಚಾಗಿ ವೇಗವೂ ವೃದ್ಧಿಯಾಗುತ್ತಿತ್ತು. ನಾನು ಭಯದಲ್ಲಿ ಹೆದರುತ್ತಿದ್ದೆ. ರೂಮಿಗೆ ಸೇಫ್ ಆಗಿ ಮುಟ್ಟುವ ಭರವಸೆ ನನಗೆ ಇರಲಿಲ್ಲ. ಅವರಿಗೆ ಹೇಳಲೂ ಆಗದು. ಹಾಗಾಗಿ ನಾನು ಲಾಲ್‌ಬಾಗ್ ತಲುಪಿದಾಗ ಉಪಾಯಮಾಡಿ, ನಂಗೆ ಅಲ್ಲಿಂದಲೇ ಬನಶಂಕರಿ ಎರಡನೇ ಹಂತಕ್ಕೆ ಬಸ್ಸು ಸಿಗ್ತದೆ, ಎಂದು ಅವರನ್ನು ಒಪ್ಪಿಸಿ ಇಳಿದೆ. ಅವರು ಇಳಿಸಿ ಮುಂದೆ ಹೋದರು. ಅಬ್ಬಾ! ಬದುಕಿದೆಯಾ ಬಡಜೀವ, ಎಂದುಕೊಂಡೆ.

ಗಂಟೆ ಹನ್ನೊಂದು ದಾಟಿತ್ತು. ಆಗೆಲ್ಲ ಬೆಂಗಳೂರಿನಲ್ಲಿ ರಾತ್ರಿ ಹನ್ನೊಂದುವರೆಯ ತನಕ ಅಲ್ಲೊಂದು ಇಲ್ಲೊಂದು ಬಿ.ಟಿ.ಎಸ್ ಬಸ್ ಓಡಾಡುತ್ತಿತ್ತು. ಆದ್ರೆ ನನ್ನ ದುರಾದೃಷ್ಟಕ್ಕೆ ಒಂದೇ ಒಂದು ಬಸ್ ಬರಲಿಲ್ಲ. ಆ ಸ್ಟಾಂಡಿನಲ್ಲಿ ನಾನೊಬ್ಬನೇ ನರಪಿಳ್ಳೆ ಬಸ್ಸಿಗೆ ಕಾಯುತ್ತಿದ್ದೆ. ಆಟೋಗಳು ವಿರಳವಾಗಿ ಓಡಾಡುತ್ತಿದ್ದವು. ಆದರೆ ಆಗ ನನ್ನ ಸಂಬಳ ತಿಂಗಳಿಗೆ ಆರುನೂರು. ಜೊತೆಗೆ ತಿಂಗಳ ಕೊನೆಯ ವಾರ. ಜೇಬಿನಲ್ಲಿ ಹತ್ತು ರುಪಾಯಿ ಮತ್ತೆ ಎಂಟಾಣೆ ಚಿಲ್ಲರೆ ಮಾತ್ರವಿತ್ತು. ಆಗೆಲ್ಲ ಆಟೋದಲ್ಲಿ ಹೋಗುವುದು ಕನಸಿನ ಮಾತು. ಇತ್ತ ಬಸ್ಸಿಗೆ ಕಾದು ಕಾದು ಸುಸ್ತಾಯಿತು. ಹಾಗಾಗಿ ನನಗಿದ್ದದ್ದು ಒಂದೇ ಒಂದು ದಾರಿ! ಅಲ್ಲಿಂದ ರೂಮ್ ತನಕ ವೇಗವಾಗಿ ನಡೆಯುವುದು, ಅದೂ ಓಡುವ ಸ್ಪೀಡಿನಲ್ಲಿ. ಬರೇ ಆರು ಕಿಲೋಮೀಟರ್. ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ಹಾಗಾಗಿ ಆ ದೂರ ಲೆಕ್ಕಕ್ಕಿರಲಿಲ್ಲ. ಕಳ್ಳರ ಭಯವಿರಲಿಲ್ಲ, ಭಯಕ್ಕೆ ನಮ್ಮಲ್ಲಿ ಕಳ್ಳತನಕ್ಕೆ ಏನಾದ್ರೂ ಇದ್ರೆ ತಾನೆ? ನಾಯಿ-ಭಯ, ಅದು ಬಿಡಿ, ನಂಗೆ ಯಾವತ್ತೂ ಇರಲಿಲ್ಲ. ಹಾಗಾಗಿ ವೇಗವಾಗಿ ರಸ್ತೆಬದಿಯಲ್ಲಿ ನಡೆಯಲು ಆರಂಭಿಸಿದೆ.

"ಯಾಕಪ್ಪ... ಓಡ್ತಿದ್ದಿಯಾ, ಇಷ್ಟೊತ್ತಲ್ಲಿ?" ಹಿಂದಿನಿಂದ ಯಾರೋ ಕೇಳಿದಂತಾಯಿತು. ತಿರುಗಿದೆ. ಮಧ್ಯವಯಸ್ಕನಂತೆ ಕಾಣುವ ದಢೂತಿ ವ್ಯಕ್ತಿಯೊಬ್ಬರು ತನ್ನ ಚೇತಕ್ ಸ್ಕೂಟರನ್ನು ನಿಧಾನಿಸುತ್ತಾ ನನ್ನನ್ನು ಕೇಳಿದ್ರು. ನಾನು ಒಮ್ಮೆ ನಿಂತು ಅವರ ಮುಖ ನೋಡಿ "ಬಸ್ ಸಿಗ್ಲಿಲ್ಲ. ಅದಕ್ಕೆ ರೂಮ್‌ಗೆ ನಡೆಯುತ್ತಿದ್ದೇನೆ" ಎಂದೆ. ಬಹುಶಃ ಆ ಮನುಷ್ಯನಿಗೆ ನಾನೊಬ್ಬ ಬಡಪಾಯಿಯಂತೆ ಕಂಡಿರಬೇಕು.

"ಎಲ್ಲಿ ರೂಮ್?" ಕೇಳಿದ್ರು.


AI generated image: No photo credits required

"ಬನಶಂಕರಿ ಸೆಕಂಡ್ ಸ್ಟೇಜ್, ಕಾವೇರಿ ನಗರದ ಹತ್ರ, ಮೋನೋ ಟೈಪ್ ಡೌನ್!" ಅವರಿಗೆ ವಿಳಾಸವನ್ನರುಹಿದೆ.

"ಸರಿ. ನಾನು ಕೋಣನಕುಂಟೆ ಕಡೆಗೆ ಹೋಗುವುದು. ಬಾ, ಹತ್ತು! ದಾರಿ ಮಧ್ಯೆ ಬಿಡ್ತೇನೆ" ಎಂದರು. ನನ್ನ ಮುಖವರಳಿತು. ಆದ್ರೂ ಅವರು ಕುಡಿದಿದ್ದಾರ, ಎಂದು ಮೊದಲು ಗಮನಿಸಿದೆ. ಜನ ಹಾಗೆ ಕಾಣ್ಲಿಲ್ಲ. ಅದು ಬಿಟ್ಟು ಆ ಕ್ಷಣದಲ್ಲಿ ನನಗೆ ಬೇರೆ

ಅನುಮಾನ, ಸಂಕೋಚ, ಎಂತದ್ದೂ ಇರಲಿಲ್ಲ. ಒಟ್ರಾಸಿ ಗೂಡು ಸೇರುವ ತವಕ! ಸರಿ! ಹಿಂದೆಮುಂದೆ ಯೋಚಿಸದೆ ಸ್ಕೂಟರ್ ಹತ್ತಿದೆ. ಅವರೇನು ನನ್ನ ಬಗ್ಗೆ ಕೇಳ್ಳಿಲ್ಲ. ನಾನೂ ಹೇಳ್ಳಿಲ್ಲ. ಆದ್ರೂ ಪಾಪ, ಅವರಿಗೆ ಏನಾದ್ರೂ ಕೊಡಬೇಕು, ಎನ್ನುವ ಹೃದಯ ವೈಶಾಲ್ಯತೆ ನನ್ನಲ್ಲಿ ಜಾಗೃತವಾಯಿತು. ಹೌದು! ಇಷ್ಟು ಉಪಕಾರ ಮಾಡಿದ ಅವರಿಗೆ ಹತ್ತಾದ್ರೂ ಕೊಡಬೇಕು. ಜಾಸ್ತಿ ನನ್ನಲ್ಲಿಲ್ಲ. ಜಾಸ್ತಿ ಕೇಳಿದ್ರೂ ಕೊಡಲ್ಲ. ಇರುವುದಷ್ಟೇ! ಸರಿ. ಅವರು ಸ್ಕೂಟರ್ ಚೆನ್ನಾಗಿ ಓಡಿಸುತ್ತಿದ್ದರು. ದಾರಿ ಮೌನವಾಗಿ ಸವೆಯಿತು.

ನಾವು ಕನಕಪುರ ರಸ್ತೆಯ ಹುಣಸೆಮರ ಸ್ಟಾಪ್ ಹತ್ರ ಬಂದಾಗ, ಅವರು "ನೀನಿಲ್ಲಿ ಇಳಿ, ಆಯ್ತಾ?" ಎಂದರು. ಅಲ್ಲಿಂದ ನನ್ನ ರೂಮಿಗೆ ಒಂದೂವರೆ ಕಿಲೋಮೀಟರ್. ಸ್ವಲ್ಪ ದೂರವೇ! ಹೇಗೂ ನನ್ನಲ್ಲಿರುವ ಹತ್ತು ರುಪಾಯಿಯನ್ನು ಅವರಿಗೆ ಕೊಡಲು ನಿರ್ಧರಿಸಿಯಾಗಿದೆ.

"ಮೋನೋಟೈಪ್ ತನಕ ಬಿಡ್ತೀರಾ?" ಎಂದು ಗಟ್ಟಿಯಾಗಿ ಕುಳಿತೆ. ಅವರು ಒಮ್ಮೆ ನನ್ನೆಡೆಗೆ ತಿರುಗಿ ಏನೋ ಗೊಣಗುತ್ತಾ ಮೋನೋಟೈಪ್ ಕಡೆಗೆ ತಿರುಗಿಸಿದರು. ನಾನು ಅಷ್ಟಕ್ಕೆ ಸುಮ್ಮನಿರದೆ, "ಕಾವೇರಿನಗರದ ತನಕ ಬಿಡ್ತೀರ?" ಎಂದೆ. ಅವರು ತಕ್ಷಣ "ಯಾಕೆ? ಮನೆ ಬಾಗಿಲಿಗೆ ಬಿಡ್ತೇನೆ" ಎಂದು ನಂಗೆ ಬೈದರೂ, ಪಾಪ, ಕಾವೇರಿನಗರದ ತನಕ ಡ್ರಾಪ್ ಮಾಡಿದರು. ಅಲ್ಲಿ ನಾನು ಸ್ಕೂಟರ್ ಇಳಿದು ಸ್ಟೈಲಲ್ಲಿ ಜೇಬಿನಲ್ಲಿದ್ದ ಹತ್ತು ರುಪಾಯಿ ನೋಟನ್ನು ಅವರಿಗೆ ನೀಡುತ್ತಾ "ಇದು ಇಟ್ಕೊಳ್ಳಿ!" ಎಂದೆ. ನನ್ನ ಮಾತಿನಲ್ಲಿ ನಯನಾಜೂಕಿನ ಲವಲೇಶವೂ ಇರಲಿಲ್ಲ. ಅವರು ಕೆಕ್ಕರಿಸಿ ಹಣವನ್ನು ಮತ್ತೆ ನನ್ನನ್ನು ನೋಡಿ "ಏನಕ್ಕೆ?" ಎಂದರು. "ಇಲ್ಲಿಯ ವರೆಗೆ ಡ್ರಾಪ್ ಮಾಡಿದ್ರಲ್ಲ. ಅದಕ್ಕೆ!" ಎಂದೆ. ತಕ್ಷಣ ಅವರು ಕೆಂಡಾಮಂಡಲವಾಗಿ "ಏಯ್, ದರ್ಬೇಸಿ! ಏನು ಅಂದ್ಕೊಂಡೆ ನನ್ನನ್ನು? ಪಾಪ, ನಡುರಾತ್ರೆ ನಡ್ಕೊಂಡು ಹೋಗ್ತಿದ್ದಾನೆ, ಅಂತ ಕನಿಕರಪಟ್ಟು ಹಿಂದೆ ಕೂರಿಸಿ ಇಲ್ಲಿ ತನಕ ಬಿಟ್ರೆ ನಂಗೇ ಪುಟಗೋಸಿ ನೋಟು ತೋರಿಸ್ತೀಯಾ?" ಎಂದರು.

ನಾನು ಅವರಲ್ಲಿ ಅಮಾಯಕನಂತೆ "ಅಲ್ಲ ಇವ್ರೆ, ನಾನು ಹಣ ಕೊಡ್ತೇನೆ, ಎಂದಾಗ ನೀವು ಎಂತದ್ದಕ್ಕೆ ನನಗೆ ಬೈಯುವುದು?" ಎಂದು ಕೇಳಿದೆ. ಅದಕ್ಕೆ ಅವರು ಮತ್ತೂ ಕೋಪಗೊಂಡು "ಏ... ಯಾವ ಸೀಮೆಯ ಬೇಕೂಫ ನೀನು? ನಿನ್ನನ್ನು ಅಲ್ಲೇ ಬಿಟ್ಟು ಬರ್ಬೇಕಿತ್ತು! ನಾಲಾಯಕ್‌ನನ್ನು ತಂದು...!" ಹೀಗೆ ನನಗೆ ಅರ್ಥವಾಗದ ಶಬ್ದಗಳಲ್ಲಿ ಉಗಿದು ಡುರ್ರನೆ ಹೊರಟು ಹೋದರು. ಛೇ! ಎಂತಹ ಅವಿವೇಕಿ ನಾನು. ಅವರು ಡ್ರಾಪ್ ಕೊಟ್ಟದ್ದಕ್ಕೆ ಬೆಲೆಕಟ್ಟಿ ಹಣ ಕೊಡಲು ಹೋಗಬಾರದಿತ್ತು, ಎಂದು ಪರಿತಪಿಸಿ ಆ ಹತ್ತರ ನೋಟನ್ನು ಜೇಬಿಗೆ ಇಳಿಸುತ್ತಾ ರೂಮ್ ಕಡೆಗೆ ನಡೆದೆ.

ಇದು ನಡೆದಿದ್ದು 1991ರಲ್ಲಿ. ಆ ಸ್ಕೂಟರ್ ವ್ಯಕ್ತಿಯ ಮುಖ ನನಗೆ ಅವಿಸ್ಮರಣೀಯವಾಗಿದೆ. ಹಾಗಾಗಿ ಯಾರಾದ್ರೂ ಚೇತಕ್ ಸ್ಕೂಟರಿನಲ್ಲಿ ಕಂಡರೆ ಅದು ಅವರೇ ಇರಬಹುದೇನೋ, ಎಂದು ನನ್ನ ಕಣ್ಣುಗಳು ಪರೀಕ್ಷಿಸುತ್ತದೆ. ಯಾಕೆಂದರೆ ನಾನು ಅವರಿಗೊಂದು ಥ್ಯಾಂಕ್ಸ್ ಹೇಳಬೇಕಿತ್ತು. ಆದರೆ ಅವರು ಮತ್ತೆ ನನಗೆ ಕಾಣ ಸಿಗಲೇ ಇಲ್ಲ. ನಿಮಗೆಲ್ಲಾದರೂ ಸಿಕ್ಕರೆ ನನ್ನ ಪರವಾಗಿ ಅವರಿಗೊಂದು ಥ್ಯಾಂಕ್ಸ್ ಹೇಳಿ, ಆಯ್ತಾ?



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ವಿಜಯಾ ಎನ್ಕ್ಲೇವ್
ಬಿಳೇಕಹಳ್ಳಿ, ಬೆಂಗಳೂರು

# ಸಾಲ ಸೋಲದೆಂದೂ ...!

ಆಕೆಯದೋ ಮುನ್ನೂರರವತ್ತೈದು ದಿನವೂ ಒಂದೇ ಗೌನು-ದಿರಿಸು !
ನಾಲಗೆಯ ಚಪಲತೆಯ ಸೊಗಡಂತೂ ಹಲವು ವಿಧ !

ಕತ್ತು ಗೇಟನ್ನು ಆತು-ಆತು ಅತ್ತ-ಇತ್ತ ದಿಟ್ಟಿಸುವುದಂತೂ –
ಊರ ಚರಿತ್ರೆಗೆಲ್ಲಾ ಆಕೆಯದ್ದೇ Single Window!

"ಎಲಾ ಇವನ! Sharp ಎಂಟು ಗಂಟೆಗೇನೇ ಡ್ಯೂಟಿಗೆ ಹೊರಟನಲ್ಲಾ!"
"ಇದೇನು ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಉದಯಿಸಿದನೋ!"
ಇವಳು ಇಷ್ಟು ಬೇಗ ಎದ್ದು ಮನೆಕೆಲಸ ಎಲ್ಲಾ ಪೂರೈಸಿ
ದೇವಸ್ಥಾನಕ್ಕೂ ಹೋಗಿ ಬಂದು ಕೆಲಸಕ್ಕೂ ಹೊರಟೇಬಿಟ್ಟಳಲ್ಲಾ!
ಮಾತು ಕಡಿಮೆ, ಮೊಬೈಲ್ ಸ್ವಿಚ್ ಆಫ್
ಬಿರಬಿರನೆ ಕಾಲ ಬಿರುಸು ನಡಿಗೆ ಕಂಡವರಿಗೇ ಬೆವರಿಳಿಸುವಂತಿತ್ತು!


AI generated image: No photo credits required

ಮಕ್ಕಳಾದರೂ ಉತ್ತಮ ಸತ್ಪ್ರಜೆಗಳಾಗಿದ್ದಾರೆ ಎನಿಸುವುದಕ್ಕೆ ಹೊತ್ತೇ ಬೇಕಿಲ್ಲ.
ಅತ್ತ-ಇತ್ತ ನೋಡುವಷ್ಟರಲ್ಲಿ – "Post" ಎಂದು ಕಿರುಚಿದ ಆ Postman
ಅದೇ ಮನೆಯ ಬಾಗಿಲಲ್ಲಿ ಹಾಕಿದ Post ಎತ್ತಿ ನೋಡೇಬಿಟ್ಟಳಲ್ಲಾ ಆ ವಾಚಾಳಿ.

'Bank Loan EMI Notice' ಎಂದಿದ್ದಿತು ಆ ಲಕೋಟೆ.
ಋಷಿ ಮೂಲ, ನದಿ ಮೂಲ ಕೇಳಬಾರದೇನೋ - ಹಾಗೆಯೇ ಇದು - ಎಂದು
ಕುತೂಹಲಕ್ಕೆ ಬೈದುಕೊಂಡು ಸುಮ್ಮನಾಗುವಳು ಆಕೆ - ಪಕ್ಕದ ಮನೆಯ ಕೆಲಸದಾಕೆ!



ಎಕ್ಕಾರ್ ಡಿ. ಪಿ. ಶೆಟ್ಟಿಗಾರ್
ಶೇಷಾದ್ರಿಪುರಂ, ಬೆಂಗಳೂರು

# ಶೆಟ್ಟಿಗಾರ್ ಸಮುದಾಯ ಮತ್ತು ಶಿಕ್ಷಣ ಕ್ಷೇತ್ರ

ಶೆಟ್ಟಿಗಾರ್ ಸಮುದಾಯದ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರ ಕೂಡ ಆಗಬೇಕಾಗಿದೆ..!

ಶೆಟ್ಟಿಗಾರ ಸಮುದಾಯದವರು ಉಡುಪಿ, ದಕ್ಷಿಣಕನ್ನಡ ಹಾಗೂ ಕಾಸರಗೋಡು ಜಿಲ್ಲೆಯಲ್ಲಿ ಅತೀ ದೊಡ್ಡ ಜನಸಂಖ್ಯೆಯಿಂದ ತಮ್ಮ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಸುಮಾರು 40-50 ವರ್ಷಗಳ ಹಿಂದೆ ಹೆಚ್ಚಿನ ಶೆಟ್ಟಿಗಾರ್ ಸಮುದಾಯವರು ತಮ್ಮ ಕುಲಕಸುಬು ವೃತ್ತಿಯನ್ನೇ ಅವಲಂಬಿಸಿದ್ದರು. ಕಾಲಕ್ರಮೇಣ ಹೆಚ್ಚಿನ ಯುವಕ ಯುವತಿಯರು ಊರು-ಪರವೂರು, ದೇಶ ವಿದೇಶಗಳಲ್ಲಿ, ವಿದ್ಯಾಭ್ಯಾಸವನ್ನು ಮಾಡಿದ್ದರಿಂದ, ಇನ್ನೂ ಕೆಲವರು ಉದ್ಯೋಗವನ್ನೇ ಅವಲಂಬಿತರಾಗಿ ನಗರ ಪ್ರದೇಶದಲ್ಲಿ ವಾಸಿಸುವ ಅನಿವಾರ್ಯತೆ ಆಗಿದೆ. ಇದರಿಂದ ಕುಲಕಸುಬು ವೃತ್ತಿಯು ಸ್ವಲ್ಪ ಮಟ್ಟಿಗೆ ಕುಂಠಿತವಾಗಲು ಕಾರಣವಾಗಿದೆ ಅಂದರೆ ತಪ್ಪೇನಿಲ್ಲ.

ಉಡುಪಿ ಜಿಲ್ಲೆ, ದ.ಕ. ಜಿಲ್ಲೆ ಹಾಗೂ ಕಾಸರಗೋಡು ಜಿಲ್ಲೆಯ ಶೆಟ್ಟಿಗಾರ್ ಸಮಾಜದ 16 ಕೂಡುಕಟ್ಟಿನಲ್ಲಿರುವ ಎಲ್ಲಾ ಧಾರ್ಮಿಕ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಜೀರ್ಣೋದ್ಧಾರ ಆಗಿದೆ ಹಾಗೂ ಸಮುದಾಯ ಭವನವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವುದು ಬೇರೆ ಸಮಾಜಕ್ಕೆ ಮಾದರಿ ಮತ್ತು ಹೆಮ್ಮೆಯ ವಿಚಾರ. ಆದರೆ ಶೆಟ್ಟಿಗಾರ್ ಸಮಾಜವು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ತುಂಬಾ ಹಿಂದಿರುವುದು ಶೆಟ್ಟಿಗಾರ್ ಸಮುದಾಯದ ಶೆಟ್ಟಿಗಾರರಿಗೆ ಬೇಸರದ ಸಂಗತಿ. ಹಲವಾರು ಕಡೆ ಶೆಟ್ಟಿಗಾರರ ಸಭೆ-ಸಮಾರಂಭದಲ್ಲಿ ಬಂದ ಗಣ್ಯಾತಿಥಿಗಳು ಶೆಟ್ಟಿಗಾರ್ ಸಮಾಜ ಶಿಕ್ಷಣ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮುಂದೆ ಬರಬೇಕೆಂದು ಕೂಡ ಪ್ರಸ್ತಾಪ ಮಾಡಿದ್ದು ನಾನು ಗಮನಿಸಿದ್ದೆ.

ಉಡುಪಿ ಜಿಲ್ಲೆ, ದ.ಕ.ಜಿಲ್ಲೆ, ಮುಂಬೈ ಹಾಗೂ ಬೆಂಗಳೂರಿನಲ್ಲಿರುವ ಶೆಟ್ಟಿಗಾರ್ ಸಮುದಾಯವು ಉತ್ತಮ ವಿದ್ಯಾರ್ಥಿಗಳನ್ನು ಗುರುತಿಸಿ, ಅತ್ಯುತ್ತಮ ಅಂಕ ಹಾಗೂ ರಾಂಕ್ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿ ಹುರಿದುಂಬಿಸುವುದು ಸ್ವಾಗತಾರ್ಹವಾಗಿದೆ. ಆದರೆ ಶೆಟ್ಟಿಗಾರ್ ಸಮುದಾಯದ ಹೆಸರಿನಲ್ಲಿ ವಿದ್ಯಾಸಂಸ್ಥೆ ಮಾಡಿದರೆ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು. ಹಾಗೆಯೇ ಸಮಾಜದಲ್ಲಿ ಎಷ್ಟೋ ನಿರುದ್ಯೋಗಿ ಯುವಕ-ಯುವತಿಯರಿಗೆ ಸಮುದಾಯದ ವಿದ್ಯಾಸಂಸ್ಥೆಯಲ್ಲಿ ಉದ್ಯೋಗದ ಲಾಭವನ್ನು ಕೂಡ ಪಡೆಯಬಹುದು. ಅದಲ್ಲದೇ ಮಕ್ಕಳಿಗೆ ಸ್ಕೂಲ್ ಫೀಸ್ ಮೇಲೆ ರಿಯಾಯಿತಿ ದರದಲ್ಲಿ ಟ್ಯೂಶನ್ ಫೀಸ್ ಕಟ್ಟಬಹುದು. ಎಷ್ಟೋ ಕಡಿಮೆ ಆದಾಯದಲ್ಲಿ ದುಡಿಯುವ ಪೋಷಕರ ಮಕ್ಕಳು ಸಮುದಾಯದ ವಿದ್ಯಾಸಂಸ್ಥೆ ಮೂಲಕ ಅನುಕೂಲವನ್ನು ಪಡೆಯಬಹುದೆಂದು ಹಾಗೂ ಶಿಕ್ಷಣ ಸಂಸ್ಥೆಯ ಮೂಲಕ ಸಮುದಾಯವು ಕೂಡ ಹಣಕಾಸಿನ ಸೌಕರ್ಯವನ್ನು ಪಡೆಯಬಹುದೆಂದು ನನ್ನ ಆಶಯ.

ಸಮಾಜದಲ್ಲಿ ಎಷ್ಟೋ ವಿದ್ಯಾವಂತರು, ಪ್ರತಿಭಾವಂತರು, ಉದ್ಯಮಿಗಳು ಸಹ ಇದ್ದರೂ ಇದುವರೆಗೆ ಶಿಕ್ಷಣ ಸಂಸ್ಥೆ ಸ್ಥಾಪಿಸಬೇಕೆಂಬ ಚಿಂತನೆ ಮಾಡದಿರುವುದು ವಿಪರ್ಯಾಸವೇ ಸರಿ. ಕೂಡುಕಟ್ಟಿನಲ್ಲಿರುವ ದೇವಸ್ಥಾನದ ಅಧ್ಯಕ್ಷರು, ಸದಸ್ಯರು, ಸಮಾಜದ ಹಿರಿಯರು ಒಟ್ಟು ಸೇರಿ ಮಾತ್ರ ಸಂಘ ಸಂಸ್ಥೆಗಳ ಮುಖಾಂತರ ಇದರ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ.

ಶಾಲಾ- ಕಾಲೇಜಿನಲ್ಲಿ ವಸತಿ ಶಾಲೆ ವ್ಯವಸ್ಥೆ ಇದ್ದಲ್ಲಿ ದೂರದ ಊರಿಂದ ಬಂದ ಸಮಾಜದ ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು. ಇದರಿಂದ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಮೂಡುವುದರಲ್ಲಿ ಸಂಶಯವೇ ಇಲ್ಲ. ಮುಂದಿನ ದಿನಗಳಲ್ಲಿ ಸಮುದಾಯದ ಸಂಘಟನೆಗಳು ಸಮುದಾಯದ ವಿದ್ಯಾಸಂಸ್ಥೆಯ ಬಗ್ಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಹಾಗೂ ದ.ಕ.ಪದ್ಮಶಾಲಿ ಸಮಾಜ ಸೇವಾ ಕೂಟ ಬೆಂಗಳೂರು ಇದರ ಬಗ್ಗೆ ಮುಂದಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಇದರ ಕುರಿತು ಗಂಭೀರವಾಗಿ ಚಿಂತಿಸುವ ಕೆಲಸ ಆಗಬೇಕೆಂದು ನಾನೊಬ್ಬ ಸಾಮಾನ್ಯ ಸದಸ್ಯನಾಗಿ ಹಾಗೂ ಸಂಘದ ಮಾಜಿ ಕೋಶಾಧಿಕಾರಿಯಾಗಿ ಇದರ ಬಗ್ಗೆ ಸಾಮಾಜಿಕ ಕಳಕಳಿಯಿಂದ ವಿನಂತಿಸುತ್ತೇನೆ.



ಯಾದವ್ ಎಸ್ ಕಲ್ಲಾಪು,
ಬೆಂಗಳೂರು

## ವಾಚಕರವಾಣಿ

**'ಶೆಟ್ಟಿಗಾರವಾಣಿ'** ಮಾಸದಿಂದ ಮಾಸಕ್ಕೆ ಉತ್ತಮವಾಗಿ ಮೂಡಿ ಬರುತ್ತಿದೆ. ಪತ್ರಿಕೆಯ ವಿನ್ಯಾಸ ಸೊಗಸಾಗಿದೆ. ಬರೆಹಗಾರರು ಆಯ್ಕೆ ಮಾಡಿಕೊಳ್ಳುವ ವಿಷಯಗಳು ವಿಭಿನ್ನವಾಗಿಯೂ ಅನನ್ಯವಾಗಿಯೂ ಇದೆ. ಈ ಇ-ಪತ್ರಿಕೆ ಸಂಪಾದಕ ತಂಡಕ್ಕೆ, ವಿನ್ಯಾಸ ತಂಡಕ್ಕೆ ಅಭಿವಂದನೆಗಳು, ಹಾಗೂ ಸ್ವಸಮಾಜದ ವಿನೂತನ ಬರೆಹಗಾರರಿಗೆ ಅಭಿನಂದನೆಗಳು! ಇನ್ನಷ್ಟು ಬರೆಯಲು ನೂತನ ಲೇಖಕರಿಗೆ ಇದೊಂದು ಉತ್ತಮ ವೇದಿಕೆಯಾಗಲಿ, ನಮ್ಮ ಸಮಾಜದಲ್ಲಿ ಬರೆಯುವವರ ಸಂಖ್ಯೆ ವೃದ್ಧಿಯಾಗಲಿ ಎಂಬುವುದಾಗಿ ಹಾರೈಸುತ್ತೇನೆ.

**ರಮೇಶ್ ಶೆಟ್ಟಿಗಾರ್**
**ಮಂಜೇಶ್ವರ**

ಆತ್ಮೀಯರೇ

ಪತ್ರಿಕೆಯಲ್ಲಿರುವ ಎಲ್ಲ ಬರಹಗಳು ಮೌಲ್ಯಯುತವಾಗಿತ್ತು. ಇಂದಿನ ಸಮಾಜಕ್ಕೆ ಬೇಕಾಗಿರುವ ನೀತಿ ಶಿಕ್ಷಣವನ್ನು ಸಹ ಕಥಾ ರೂಪದಲ್ಲಿ ನೀಡುತ್ತಿದ್ದೀರಿ. ಅಭಿನಂದನೆಗಳು. ನನಗೆ ಅತಿ ಇಷ್ಟವಾದ ಕಥೆ ರಮೇಶ್ ಶೆಟ್ಟಿಗಾರರ "ಮೂರಂಕ ಪ್ರಹಸನ". ಈ ಕಥೆಯನ್ನು ಓದುತ್ತಿದ್ದಂತೆ ನನ್ನ ಕಾಲೇಜು ದಿನಗಳಲ್ಲಿ ನನ್ನ ತರಗತಿಯಲ್ಲಿದ್ದ ಶೆಟ್ಟಿಗಾರ್ ಮಿತ್ರನೋರ್ವನ ಇಂತಹ ಬುದ್ದಿಯು ಮತ್ತೊಮ್ಮೆ ನೆನಪಿಗೆ ಬಂದು ಕಚಗುಳಿಯಿಟ್ಟಿತು.
ವಂದನೆಗಳು

**ಡಾ. ಶಿವಪ್ರಸಾದ್ ಕಾರ್ಕಳ**
**ಉಡುಪಿ**

# ನಮ್ಮನಿಮ್ಮೊಳಗಿನ ಗುಟ್ಟು

"ನಿನ್ನ ಕಂಡರೆ ನನ್ನ ಮೈಯೆಲ್ಲಾ ಉರಿಯುತ್ತೆ. ನೀನು ಸರಿಯಿಲ್ಲ. ನನ್ನ ಬಗ್ಗೆ ನಿನಗೇನು ಗೊತ್ತು. ನಾನು ಹುಟ್ಟಿದಾಗಿನಿಂದ ಕಷ್ಟ ಅಸೂಯೆಗಳನ್ನು ಎದುರಿಸಿ ಮೆಟ್ಟಿ ನಿಂತವನು. ಅದರ ಬಗ್ಗೆ ನನಗಿಂತ ಹೆಚ್ಚು ಇನ್ನ್ಯಾರಿಗೂ ಗೊತ್ತಿರ್ಲಿಕ್ಕೆ ಸಾಧ್ಯನೇ ಇಲ್ಲ. ಇವನು ನನ್ನ ಪ್ರಾಣಗೆಳೆಯ. ಇವನಿಗೆ ಕೇಳು ನನ್ನ ಬಗ್ಗೆ ಹೇಳ್ತಾನೆ. ಇವರೆಲ್ಲ ನನ್ನ ಕಷ್ಟದ ದಿನಗಳಲ್ಲಿ ನನ್ನಜೊತೆ ಇದ್ದವರು. "

ಎಷ್ಟೋ ಬಾರಿ ನಾವು ಹೀಗೆ ಯಾರಿಗಾದರೂ ಹೇಳಿರಬಹುದು. ಅಥವಾ ಮನಸಲ್ಲೇ ಅಂದುಕೊಂಡಿರಬಹುದು. ಅಥವಾ ಬೇರೆ ಯಾರಾದರೂ ನಮಗೆ ಹೇಳಿರಬಹುದು. ಇದನ್ನು ಕೇಳಿದ ನಮಗೆ ಅಥವಾ ಇದನ್ನು ಕೇಳಿಸಿಕೊಂಡವನು ಪ್ರತಿಕ್ರಿಯಿಸಿಸದೆ ಇರಲಾರ. ಇದು ಮನುಷ್ಯನ ಸಹಜ ಗುಣ.

ಹೀಗೆ ಹಲವಾರು ಸನ್ನಿವೇಶಗಳು ನಮ್ಮ ನಿಮ್ಮ ಬದುಕಿನಲ್ಲಿ ಬಂದಿರಬಹುದು. ಆದರೆ ಇದರ ಕಾರಣಗಳೇನು. ಎಷ್ಟೋ ಜನ ಬರೀ ಮಾತಲ್ಲೇ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಒಬ್ಬ ಅಂತರ್ಮುಖಿ (introvert) ಬಹಿರ್ಮುಖಿ (extrovert) ಆಗಲು ಅವನು ಏನೆಲ್ಲಾ ಮಾಡಬೇಕು. ಅವನಿಗೆ ನಾವು ಏನೆಲ್ಲಾ ಸಹಾಯ ಮಾಡಬಹುದು. ಬೇರೆಯವರ ಬಗ್ಗೆ ನಾವೆಷ್ಟು ತಿಳಿದುಕೊಂಡಿದ್ದೇವೆ? ನಮ್ಮನ್ನು ನಾವು ಎಷ್ಟು ಸರಿಯೆಂದು ಅಂದು ಕೊಂಡಿರುತ್ತೇವೆ? ನಮ್ಮ ವಿಚಾರಗಳಲ್ಲಿ ಎಷ್ಟು ತಪ್ಪಿರಬಹುದು. ಇದೆಲ್ಲದರ ಬಗ್ಗೆ ತಿಳಿದುಕೊಳ್ಳಲು ಡೇವಿಡ್ ಬ್ರೂಕ್ಸ್ ಅವರ ಈ ಪುಸ್ತಕ **"How to know a person: An art of seeing others deeply and being deeply seen"** ನಾವೆಲ್ಲರೂ ಓದಲೇ ಬೇಕು.




Photo Credit: Penguin Books, Australia




Photo Credit: Yashaswi J

ಉದಾಹರಣೆಗಳೇ ತುಂಬಿರುವ ಈ ಪುಸ್ತಕವನ್ನು ಮೂರು ಹಂತಗಳಲ್ಲಿ ಡೇವಿಡ್ ರವರು ಬರೆದಿರುತ್ತಾರೆ. ಮೊದಲ ಹಂತವನ್ನು **"I see you"**, ಎರಡನೆಯದನ್ನು **"I see you in your struggles"** ಹಾಗು ಮೂರನೆಯದನ್ನು **"I see you with your strengths"** ಎಂದು ಹೆಸರಿಸಿದ್ದಾರೆ. ಇಲ್ಲಿ ಒಬ್ಬ ಮನುಷ್ಯನ ಬಗ್ಗೆ ತಿಳಿದುಕೊಳ್ಳುವ ಬಗ್ಗೆ ಉದಾಹರಣೆಗಳೊಂದಿಗೆ ಸೂಕ್ಷ್ಮವಾಗಿ ಬರೆದಿದ್ದಾರೆ.

ನಮಗೆಲ್ಲ ಗೊತ್ತಿರುವ ಹಾಗೆ ಯಹೂದಿಯರೆಲ್ಲರೂ ಅತ್ಯಂತ ಹೆಸರು ಮಾಡಿರುವಂತ ವ್ಯಕ್ತಿಗಳು. 2007ರಲ್ಲಿ ಯಹೂದಿಯವರಾದ ಯರೀವ್ ಎಂಬ ವ್ಯಕ್ತಿಯೊಂದಿಗೆ ಕೆಲಸದ ಮೇರೆಗೆ ಮೆಲ್ಬೊರ್ನಿಗೆ ಹೋದಾಗ ಇವರು ಯಹೂದಿಯವರ ಬಗ್ಗೆ ಹೇಳುತ್ತಿದ್ದರು. ಆಗ ಆಲ್ಬರ್ಟ್ ಐನ್ಸ್ಟೀನ್ ಜೊತೆಗೆ ಜರ್ನಲಿಸ್ಟ್ ಡೇವಿಡ್ ಬ್ರೂಕ್ಸ್ ಅವರ ಬಗ್ಗೆ ಒಂದೆರಡು ವಿಚಾರಗಳನ್ನು ನನಗೆ ಹೇಳಿದ್ದರು. ಇವರ ಬಗ್ಗೆ ಅಂದು ಬಿಟ್ಟರೆ ಬೇರೆ ಯಾವತ್ತು ನಾನು ಕೇಳಿದವನಲ್ಲ. ಆದರೆ ಈಗ ಡೇವಿಡ್ ಬ್ರೂಕ್ಸ್ ಒಬ್ಬ ಹೆಸರಾಂತ ಜರ್ನಲಿಸ್ಟ್. ನಾನು ಈಗ ಕೆಲಸ ಮಾಡುತ್ತಿರುವ ಕಂಪನಿಯ CEO ನಮಗೆ ಈ ಪುಸ್ತಕವನ್ನು ಕೊಟ್ಟಾಗ ಯರೀವ್ ನೆನಪಾದರು. ಡೇವಿಡ್ ಬ್ರೂಕ್ಸ್ ಏನೆಲ್ಲಾ ಈ ಪುಸ್ತಕದಲ್ಲಿ ಬರೆದಿರಬಹುದೆಂಬ ಕುತೂಹಲದೊಂದಿಗೆ ಓದಲು ಶುರು ಮಾಡಿದೆ. ತುಂಬಾ ವಿಚಾರಗಳು ನಮ್ಮ ಮನಸ್ಸಿನ ಒಳಗೆ ಉಳಿದಿರುತ್ತದೆ. ಇದೆಲ್ಲವನ್ನೂ ತಿಳಿದುಕೋಳ್ಳಲು ಈ ಪುಸ್ತಕ ಸಹಕಾರಿಯಾಗುವುದರಲ್ಲಿ ಸಂಶಯವೇ ಇಲ್ಲ ಎಂದು ಅರಿವಾಯಿತು. ಇದನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳಬೇಕೆಂದೆನಿಸಿತು.

ಈ ಪುಸ್ತಕವನ್ನು ಬಿಡುವಾದ ಸಮಯದಲ್ಲಿ ಓದಲು ಹಿಂಜರಿಯಬೇಡಿ.



ಯಶಸ್ವಿ ಜೆ.
ಜ್ಞಾನಭಾರತಿ,
ಬೆಂಗಳೂರು

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.
- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವ್ಯಕ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.
- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.
- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.
- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILES) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**

# ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ)

ಆಡಳಿತ ಕಛೇರಿ: ನಂ. 8, ಶಾಂತವೇರಿ ಗೋಪಾಲಗೌಡ ನಗರ 4ನೇ ಅಡ್ಡರಸ್ತೆ, ಮೂಡಲಪಾಳ್ಯ, ಬೆಂಗಳೂರು 560072.
dkpadmashalibng@gmail.com • www.dkpadmashalibng.in • +91 95354 43311

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟದ **34ನೇ** ವಾರ್ಷಿಕ ಮಹಾಸಭೆಯು **ದಿನಾಂಕ 27-10-2024 ಭಾನುವಾರ ಬೆಳಿಗ್ಗೆ 9 ಘಂಟೆಗೆ** ಸರಿಯಾಗಿ **ಕೆ.ಇ.ಬಿ. ಎಂಜಿನಿಯರಿಂಗ್ ಅಸೋಸಿಯೇಶನ್,** ರೇಸ್ ಕೋರ್ಸ್ ರಸ್ತೆ, ಆನಂದ ರಾವ್ ಸರ್ಕಲ್, ಬೆಂಗಳೂರು ಇಲ್ಲಿ ನೆರವೇರಲಿದೆ.

ಅಧ್ಯಕ್ಷತೆ

**ಶ್ರೀಮತಿ ಭಾನುಮತಿ ಡಿ. ಶೆಟ್ಟಿಗಾರ್**
ಕೂಟದ ಅಧ್ಯಕ್ಷರು

ಮುಖ್ಯ ಅತಿಥಿಗಳು

**ಶ್ರೀ ರೋಷನ್ ಶೆಟ್ಟಿಗಾರ್,** ಬಿ.ಇ
ಜನರಲ್ ಮ್ಯಾನೇಜರ್, ಟೊಯೋಟ ಕಿರ್ಲೋಸ್ಕರ್ ಮೋಟಾರ್ಸ್

**ಶ್ರೀ ರಾಮದಾಸ್ ಶೆಟ್ಟಿಗಾರ್**
ಅಧ್ಯಕ್ಷರು
ದ. ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ
ಮಂಗಳೂರು

**ಶ್ರೀ ಉತ್ತಮ್ ಶೆಟ್ಟಿಗಾರ್**
ಅಧ್ಯಕ್ಷರು
ಪದ್ಮಶಾಲಿ ಸಮಾಜ ಸೇವಾ ಸಂಘ
ಮುಂಬಯಿ

**ಶ್ರೀ ರಘುರಾಮ್ ಶೆಟ್ಟಿಗಾರ್**
ಅಧ್ಯಕ್ಷರು
ಪದ್ಮಶಾಲಿ ಸಮುದಾಯ,
ದುಬೈ, ಯು.ಎ.ಇ

**ಗೌರವಾರ್ಪಣೆ**

**ಡಾ| ರೇವತೀ, ಎಮ್.ಎ. ಪಿ.ಎಚ್.ಡಿ**
Circle Police Inspector, ಕಿಕ್ಕೇರಿ, ಮಂಡ್ಯ

**D K Padmashali Samaja Seva Koota (R), Bengaluru,**
**Bank of Baroda, Bangalore Main Branch, Bengaluru**
**A/c No.73840100005233**
**IFSC Code: BARB0BANGAL**

5th character must be read as ZERO

ಯು.ಪಿ.ಐ (UPI) ಮುಖಾಂತರ ಸಂದಾಯ ಮಾಡುವವರು +91 95354 43311 ಗೆ ಸ್ಕ್ರೀನ್-ಶಾಟ್ (screenshot) ಕಳುಹಿಸಬೇಕಾಗಿ ವಿನಂತಿ.